ಆಕಾಶದೆತ್ತರ ಬೆಳೆದು ಫಸಲು ಹೊತ್ತು ನಿಂತಿವೆ! ಸುತ್ತಲ ಜನ ಕಾಯಿ ಕೀಳದೆ ಹಾಗೇ ಉಳಿಸಿದ್ದಾರಲ್ಲ ಅಂತ ಆಶ್ಚರ್ಯವಾಯಿತು.

ಮನೆಯ ಮಧ್ಯ ನಿಲ್ಲಿಸಿದ್ದ ಕಂಬಕ್ಕೆ ಆಸರೆಯಾಗಿ ಕಟ್ಟಿದ್ದ ಮಣ್ಣಿನ ಗೋಡೆಯ ಮೇಲೆ ಅವ್ವ, ಅಜ್ಜನ ಫೋಟೊ ನೇತು ಹಾಕಿದ್ದಳು. ಅದರ ಕೆಳಗೇ ಕೂತು ಓದುತ್ತಿದ್ದುದು ನೆನಪಾಯಿತು. ಈಗ ಗೋಡೆಯೂ ಇಲ್ಲ. ಅಜ್ಜನ ಫೋಟೊ ಸಹ ಇಲ್ಲ. ಅಡುಗೆಮನೆಯಲ್ಲಿ ಒಲೆಯ ಕುರುಹುಗಳಿವೆ. ಇದೇ ಒಲೆಯ ಮೇಲೆ ಬೇಯಿಸಿ, ಬಸಿದು ನಮಗೆಲ್ಲ ಬಡಿಸುತ್ತಿದ್ದುದು. ಅವ್ವ ಕೂರುತ್ತಿದ್ದ ಜಾಗ ಇದೇ ಅನ್ನಿಸಿ ಒಲೆಯ ಮುಂದಿನ ನೆಲದ ಮೇಲೆ ಕೈಯಿಂದ ಸವರಿದ. ಖಾಲಿ ಖಾಲಿ ನೆಲ. ಎಷ್ಟು ಹೊತ್ತು ಹಾಗೇ ಕುಳಿತಿದ್ದನೊ.

ಅಷ್ಟರಲ್ಲಿ ಯಾರೋ ಒಬ್ಬ ಬಂದ. 'ಬಾರಪ್ಪ ನಮ್ಮನೆಗೆ, ಒಂದು ತುತ್ತು ತಿಂದು ನಮ್ಮನೆಯಲ್ಲೇ ಮಲಗು' ಅಂದ. ಅವನು ಉತ್ತರಿಸಲಿಲ್ಲ. 'ಎದ್ದು ಬಾ, ಎಷ್ಟೊತ್ತು ಅಸಕಂಡು ಕೂತಿರ್ತೀಯಾ' ಅಂದರೂ ಸುಮ್ಮನೇ ಇದ್ದುದನ್ನು ನೋಡಿ ಕರೆಯಲು ಬಂದವನು ಹಾಗೇ ಹೋದ. ನಮ್ಮದೇ ಮನೆಯ ಅಂಗಳ ಇರುವಾಗ ಯಾರದೋ ಮನೆಯಲ್ಲಿ ಮಲಗಬೇಕು ಅಂತ ರಾಮಸ್ವಾಮಿಗೆ ಅನ್ನಿಸಲಿಲ್ಲ. ಬ್ಯಾಗಿನಿಂದ ಹೊದಿಕೆ ತೆಗೆದ. ಅದನ್ನೇ ಹಾಸಿಕೊಂಡು ಅಂಗಳದಲ್ಲೇ ಅಡ್ಡಾದ.

ಸಣ್ಣವನಿದ್ದಾಗ ಬೇಸಿಗೆಯಲ್ಲಿ ಅವ್ವ, ಅಪ್ಪನ ಜತೆ ಇದೇ ಅಂಗಳದಲ್ಲೇ ಮಲಗುತ್ತಿದ್ದ. ಎಷ್ಟೋ ಸಲ ಆಕಾಶ ನೋಡುತ್ತ, ಹಾಗೆ ನಿದ್ದೆಗೆ ಜಾರುತ್ತಿದ್ದ... ಅದೇ ಶುಭ್ರ ಆಕಾಶ. ನಕ್ಷತ್ರಗಳು ಫಳ ಫಳ ಹೊಳೆಯುತ್ತಿವೆ! ಕೆಲವು ಮಂಕಾಗಿವೆ! ಅವ್ವ ಈಗ ನಕ್ಷತ್ರವಾಗಿರಬಹುದೇ? ಅಲ್ಲಿಂದಲೇ ಇಲ್ಲಿ ಮಲಗಿರೊ ನನ್ನನ್ನು ನೋಡುತ್ತಿರಬಹುದೇ? ಅವ್ವನ ನಕ್ಷತ್ರ ಯಾವುದಿರಬಹುದು ಅಂತ ಕಣ್ಣು ಕೀಲಿಸಿಕೊಂಡು ನೋಡಿಯೇ ನೋಡಿದ. ಕೇರಿಯಲ್ಲಿ ನೀರವ ಮೌನ. ದೂರದಲ್ಲೆಲ್ಲೋ ಊಳಿಡುವ ನಾಯಿ. ಆಕಾಶ ನೋಡುತ್ತ ಹಾಗೇ ನಿದ್ದೆಗೆ ಜಾರಿದ.

ಲಾಟೀನು ಬೆಳಕಲ್ಲಿ ಓದುತ್ತ ಕೂತಿದ್ದಾನೆ. ಎದುರಿಗೆ ಅವ್ವ ಕೂತಿದ್ದಾಳೆ! 'ಮಗಾ ತೂಕಡಿಸಬೇಡ... ಹೋಗು ಮಕ ತೊಳಕಂಡು ಬಾ... ಪರೀಕ್ಷೆ ಹತ್ರ ಬಂತು. ಈಗ ಅಸಡ್ಡೆ ಮಾಡಿದರೆ ಮುಂದೆ ಕಷ್ಟವಾಗುತ್ತೆ, ಓದೋದು ನಿಲ್ಲಿಸಬೇಡ. ಮುಂದೆ ನಿದ್ದೆ ಮಾಡೋದು ಇದ್ದೇ ಇದೆ...' ಅಂತ ಹೇಳುತ್ತಿದ್ದಾಳೆ, ಥಟ್ಟನೆ ಎಚ್ಚರವಾಯಿತು. ಎದುರಿಗೆ ಅವ್ವ ಇಲ್ಲ. ಅಂಗಳದಲ್ಲಿ ಒಬ್ಬನೇ ಮಲಗಿದ್ದೇನೆ. ಕಂಡದ್ದು ಕನಸು ಅನ್ನುವುದು ಅರಿವಿಗೆ ಬರಲು ಕೆಲ ನಿಮಿಷಗಳು ಬೇಕಾದವು. ಅಂಗಳ ತಣ್ಣಗಿದೆ. ಎದೆಯೊಳಗೆ ಬೆಚ್ಚನೆಯ ಭಾವವಿದೆ. ಅವ್ವ ಇಲ್ಲೇ ಸುಳಿದಾಡುತ್ತ ಇನ್ನೂ ಎಚ್ಚರಿಸುತ್ತಲೇ ಇದ್ದಾಳೆ ಅನ್ನಿಸಿತು.

ಬೆಳಕಾಗುತ್ತಿದ್ದಂತೆ ಇಲ್ಲಿಂದ ಹೊರಟು ಬಿಡಬೇಕು ಅನ್ನಿಸಿ ಗಡಿಯಾರ ನೋಡಿಕೊಂಡ. ಮೂರು ಗಂಟೆ ಹತ್ತು ನಿಮಿಷ. ಬೆಳಕು ಹರಿಯಲು ಇನ್ನೂ ಸಾಕಷ್ಟು ಸಮಯವಿದೆ ಅಂದುಕೊಳ್ಳುತ್ತ ಆಕಾಶದಲ್ಲಿ ಅವ್ವ, ಅಪ್ಪ, ಬಾಬಾ ಸಾಹೇಬರ ನಕ್ಷತ್ರಗಳಿರಬಹುದೇ ಅಂತ ಹುಡುಕತೊಡಗಿದ...

(ಡಾ. ಆರನಕಟ್ಟೆ ರಂಗನಾಥ್ ಅವರ ಕವಿತೆ ಈ ಕಥೆಗೆ ಪ್ರೇರಣೆ)


**ಪ್ರೇಮಕುಮಾರ್ ಹರಿಯಬ್ಬೆ**

ಚಿತ್ರದುರ್ಗ ಜಿಲ್ಲೆಯ ಹರಿಯಬ್ಬೆ ಗ್ರಾಮದವರು. ವೃತ್ತಿಯಿಂದ ಪತ್ರಕರ್ತ. ಈಗ ಬೆಂಗಳೂರಿನಲ್ಲಿ ವಾಸ. 'ಪ್ರಜಾವಾಣಿ', 'ಸುಧಾ', 'ಮಯೂರ' ಪತ್ರಿಕೆಗಳಲ್ಲಿ ಅವರ ಕಥೆಗಳು ಪ್ರಕಟವಾಗಿವೆ. ಅವರ ಕಥಾಸಂಕಲನ 'ಅಕಾಲ' ಇತ್ತೀಚೆಗೆ ಪ್ರಕಟವಾಗಿದೆ.